# ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದಲ್ಲಿ: ದಿವ್ಯದರ್ಶನ

ಮೂಲ : ಸೋದರಿ ದೇವಮಾತಾ

ಕನ್ನಡಕ್ಕೆ : ಡಾ. ಕೆ. ಎ. ನಾರಾಯಣನ್

ಭಾಗ ೩

(೧೯೮೨ರಲ್ಲಿ 'ಉದಯವಾಣಿ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಮಾಲೆಯ ಮರುಮುದ್ರಣ)

ಅನಂತರದ ನನ್ನ ಬದುಕು ಕೆಲಕಾಲ ವಿಶ್ವಪರ್ಯಟನೆಯಲ್ಲಿ ಕಳೆಯಿತು. ನಾನು ಪೂರ್ವ ದಿಗಂತದ ಭಾರತದಿಂದ ಹಿಡಿದು ಪಶ್ಚಿಮ ದಿಗಂತದ ಕ್ಯಾಲಿಫೋರ್ನಿಯಾದವರೆಗೆ ಸಂಚಾರವನ್ನು ಕೈಗೊಂಡು ಮಧ್ಯೆ ಮಧ್ಯೆ ಸಂಘದ ವಿವಿಧ ಕೇಂದ್ರಗಳಲ್ಲಿ ಅನೇಕ ದಿನಗಳನ್ನು ಕಳೆದೆ. ೧೯೨೩ರಲ್ಲಿ ಸ್ವಾಮಿ ಪರಮಾನಂದರು ಲಾಸ್ ಏಂಜಲೀಸ್ ನಗರದ ಬಳಿ ಸಿಯಾರ್ರಾ ಮಾದ್ರ ಪರ್ವತ ಶ್ರೇಣಿಯಲ್ಲಿ 'ಆನಂದಾಶ್ರಮ' ಎಂಬ ಆಶ್ರಮವನ್ನು ಸ್ಥಾಪಿಸಿದರು. ಅದು ಬೋಸ್ಟನ್ ನಗರದಲ್ಲಿದ್ದ ಕೇಂದ್ರದ ವಿಸ್ತರಣಾ ವಿಭಾಗ ಆಗಿತ್ತು. ನಾನು ಆ ಕೇಂದ್ರದಲ್ಲಿ ಸ್ವಾಮಿಗಳ ಸಹಾಯಕಳಾಗಿ ಕೆಲಸ ಮಾಡಿದ್ದ ಕಾರಣ ಈ ಹೊಸ ವಿಭಾಗದಲ್ಲೂ ಅದೇ ಕೆಲಸವನ್ನು ಮುಂದುವರಿಸಿ, ಅಲ್ಲೇ ನೆಲೆಸಿದೆ.

ಕಾಲಕ್ರಮದಲ್ಲಿ ಅನೇಕ ಕಟ್ಟಡಗಳು ಅಲ್ಲಿ ನಿರ್ಮಾಣವಾದವು. ಅವುಗಳಲ್ಲಿ ಸರ್ವಧರ್ಮ ಸಮನ್ವಯಕ್ಕೆಂದು ಮುಡಿಪಾಗಿಟ್ಟ ಸುಂದರವಾದ ದೇವಮಂದಿರವೂ ಒಂದು. ಅಲ್ಲಿನ ನಿವಾಸಿಗಳು ರಾತ್ರಿ ನಿದ್ರಿಸಿದ ನಂತರ ನಾನು ಪ್ರತಿದಿನ ಆ ಮಂದಿರಕ್ಕೆ ತೆರಳಿ ಸ್ವಲ್ಪ ಹೊತ್ತು ಧ್ಯಾನವನ್ನು ಮಾಡುವ ಅಭ್ಯಾಸವಿಟ್ಟುಕೊಂಡಿದ್ದೆ. ಅದರಂತೆ ಒಂದು ದಿನ ರಾತ್ರಿ ನಾನು ಮಂದಿರದ ಉಪ್ಪರಿಗೆಯ ಮೆಟ್ಟಿಲುಗಳನ್ನೇರಿ ಗರ್ಭಗೃಹದ ಬಾಗಿಲನ್ನು ತೆರೆದು ಪೂಜಾಮಂದಿರವನ್ನು ಪ್ರವೇಶಿಸಿದಾಗ ನನಗೆ ಆ ಮಂದಿರವು ಅತ್ಯಂತ ವಿಶಾಲವಾಗಿದ್ದು ಗಾಢಾಂಧಕಾರದಿಂದ ಕೂಡಿ ಸ್ತಬ್ಧವಾಗಿರುವಂತೆ ತೋರಿತು. ನನಗೆ ಆಗ ಹೊರಗಿನ ಆ ನೀರಸ ವಾತಾವರಣದಿಂದ ತಪ್ಪಿಸಿಕೊಂಡು ಬಂದು ಇಲ್ಲಿನ ಪ್ರಶಾಂತವಾದ ಮತ್ತು ಸುರಕ್ಷಿತವಾದ ಮಂದಿರದಲ್ಲಿ ಆಶ್ರಯ ಪಡೆದೆನೆಂದು ಬಹಳ ಸಂತೋಷವಾಯಿತು.



ಸೋದರಿ ದೇವಮಾತಾ

ನಾನು ಭಗವಂತನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿ ವೇದಿಕೆಯ ಬಳಿ ಕುಳಿತು ನಾಮಜಪ ಮಾಡಲಾರಂಭಿಸಿದೆ. ಹೀಗೆಷ್ಟು ಕಾಲ ಕುಳಿತಿದ್ದೆ ಎಂದು ನನಗೆ ಗೊತ್ತಿಲ್ಲ ; ಇದ್ದಕ್ಕಿದ್ದಂತೆ ವೇದಿಕೆಯ ಹಿಂದಿನ ಗೋಡೆ ಪರದೆಯೊಂದು ಮೇಲಕ್ಕೆ ಸರಿಯುವಂತೆ ಅತ್ಯಂತ ಸ್ವಾಭಾವಿಕವಾಗಿ ಮತ್ತು ನಿಶ್ಶಬ್ದವಾಗಿ ಮೇಲಕ್ಕೆ ಸರಿಯಿತು. ಆಗ ನಾನು ಆ ಗೋಡೆಯ ಹಿಂದಿದ್ದ ಪರ್ವತ ಶ್ರೇಣಿಗಳ ಮನೋಹರವಾದ ದೃಶ್ಯಗಳನ್ನು ಕಣ್ಣಾರೆ ಕಾಣುತ್ತಿದ್ದೆ ಮತ್ತು ಇವೆಲ್ಲವೂ ನನಗೆ ಅತ್ಯಂತ ಸಹಜವಾಗಿಯೇ ತೋರಿತು; ಏನೂ ಆಶ್ಚರ್ಯವನ್ನು ಉಂಟುಮಾಡಲಿಲ್ಲ. ಹೀಗಾಗುವುದು ಅಸ್ವಾಭಾವಿಕ ಎಂದು ನನಗೆ ಹೊಳೆಯಲೇ ಇಲ್ಲ. ನಾನು ಪರ್ವತದ ಒಂದು ಶಿಖರದಿಂದ ಮತ್ತೊಂದು ಶಿಖರಕ್ಕೆ ನನ್ನ ನೋಟವನ್ನು ಬದಲಾಯಿಸುತ್ತಿರಲು ನನ್ನ ನೋಟ ಆ ಶಿಖರಗಳಲ್ಲಿ ಅತಿ ಎತ್ತರವಾದ ಶಿಖರದ ಮೇಲೆ ಪ್ರಜ್ವಲಿಸುತ್ತಿರುವ ಒಂದು ಜ್ಯೋತಿಯೆಡೆಗೆ ಸೆಳೆಯಲ್ಪಟ್ಟಿತು. ಆ ದೇದೀಪ್ಯಮಾನವಾದ ಪ್ರಭೆಯ ಮಧ್ಯೆ ಶ್ರೀರಾಮಕೃಷ್ಣರು ಮೂರ್ತೀಭವಿಸಿ ನಿಂತಿದ್ದಾರೆ; ಅವರು ಒಂದು ಉದ್ದನೆಯ ಶಾಲನ್ನು ಹೊದ್ದುಕೊಂಡಿದ್ದಾರೆ ಮತ್ತು ಅವರ ಪ್ರಭೆಯು ಸುತ್ತಲಿನ ಪ್ರಭೆಯೊಡನೆ ಸ್ಪರ್ಧಿಸುತ್ತಿದೆ.

ಅವರ ಮುಖ ದಿವ್ಯ ತೇಜಸ್ಸಿನಿಂದ ಕೂಡಿದೆ ಮತ್ತು ಆಶೀರ್ವಾದ ಸೂಚಕವಾಗಿ ನೀಡಿರುವ ಅವರ ಹಸ್ತದಿಂದ ಅನುಗ್ರಹಗಳು ಹೊರಸೂಸುತ್ತಿವೆ.

ಅವರು ಸ್ವಲ್ಪ ಕಾಲ ಹಾಗೆಯೇ ನಿಂತಿದ್ದು, ಅನಂತರ ಸಾವಕಾಶವಾಗಿ ಮಂದಿರದ ಕಡೆ ಇಳಿಯಲು ಆರಂಭಿಸಿದರು. ಅದರೆ ಅವರು ಪರ್ವತ ಶಿಖರದಿಂದ ಕೆಳಗಿಳಿಯದೆ ಬೆಳಕಿನ ನೇರವಾದ ಮಾರ್ಗದಲ್ಲಿ ಮುಂದುವರಿದು ಬಂದರು. ಅವರು ನನ್ನ ಬಳಿಗೆ ಬಂದಾಗ ಅವರ ಚರಣಗಳಿಂದಲೇ ಆ ಬೆಳಕು ಹೊರಹೊಮ್ಮುತ್ತಿರುವುದಾಗಿಯೂ ಮತ್ತು ಆ ಬೆಳಕಿನ ಹಾದಿಯಲ್ಲಿ ಆ ಬೆಳಕಿನ ಮೇಲೆಯೇ ಅವರು ನಡೆದು ಬರುತ್ತಿರುವುದಾಗಿಯೂ ಗೊತ್ತಾಯಿತು. ಆ ನಡಿಗೆ ಅತ್ಯಂತ ಗಾಂಭೀರ್ಯದಿಂದಲೂ ಮಹಾ ವೈಭವದಿಂದಲೂ ಕೂಡಿದ್ದು ಭಯ, ವಿಸ್ಮಯಗಳನ್ನು ಉಂಟು ಮಾಡಬಹುದಾಗಿತ್ತು. ಹೀಗಿದ್ದರೂ ಕರುಣಾಕಟಾಕ್ಷ ಮತ್ತು ಮಂದಹಾಸದಿಂದ ಕೂಡಿದ ಅವರ ವದನಾರವಿಂದವು ಅಂತಹ ಭಯ, ವಿಸ್ಮಯಗಳನ್ನು ಸಂಪೂರ್ಣವಾಗಿ ಅಳಿಸಿಹಾಕಿಬಿಟ್ಟಿತ್ತು.

ಅವರು ಹಾಗೆಯೇ ಮುಂದುವರಿದು ಇನ್ನೂ ತೆರೆದೇ ಇದ್ದ ಮಂದಿರದ ಗೋಡೆಯ ಮೂಲಕ ಪ್ರವೇಶಿಸಿ ವೇದಿಕೆಯ ಬಲ ಭಾಗಕ್ಕೆ ಬಂದು, ಅದರ ಮೇಲೆ ತಮ್ಮ ಕೈಗಳನ್ನೂರಿ ನಿಂತುಕೊಂಡರು. ಕೂಡಲೇ ಮೇಲಕ್ಕೆ ಸರಿದಿದ್ದ ಗೋಡೆ ಮತ್ತೆ ಕೆಳಗೆ ಸರಿದು ಹಿಂದಿನಂತೆ ಕೂಡಿಕೊಂಡಿತು. ನಂತರ ಆ ಉಜ್ವಲ ಪ್ರಕಾಶ ಕ್ರಮೇಣ ಕಡಿಮೆಯಾಗಿ ಪರ್ವತ ಶಿಖರದ ದಿವ್ಯಸ್ವರೂಪದ ಶ್ರೀರಾಮಕೃಷ್ಣರು ಮಾನವರೂಪದ ಶ್ರೀರಾಮಕೃಷ್ಣರಾಗಿ ಬದಲಾಯಿಸಿದರು. ಆಗ ಅವರು ತಾವು ಶರೀರಧಾರಿಗಳಾಗಿದ್ದಾಗ ಹೇಗೆ ಕಂಡುಬರುತ್ತಿದ್ದರೋ ಹಾಗೆಯೇ ಕಂಡುಬಂದರು. ಅವರು ಮುಗುಳುನಗೆಯನ್ನು ಬೀರುತ್ತ ಮೌನವಾಗಿ ಸ್ವಲ್ಪಕಾಲ ನಿಂತಿದ್ದು, ಅನಂತರ ನನ್ನೊಡನೆ ಸಂಭಾಷಿಸಲು ಆರಂಭಿಸಿದರು. ಅವರು ಆಡಿದ ಮಾತುಗಳು ನನ್ನ ಅಂತರಂಗಕ್ಕೆ ಅವರು ನೀಡಿದ ಸಂದೇಶಗಳು; ಕೇವಲ ಈ ಬಾಹ್ಯ ಶ್ರವಣೇಂದ್ರಿಯಕ್ಕಲ್ಲ ಮತ್ತು ಅದು ಯಾರಿಗೆಂದು ಕರುಣಿಸಲ್ಪಟ್ಟಿತ್ತೋ ಅವಳೊಬ್ಬಳಿಗೆ ಮಾತ್ರ.

ಅಂದು ಬಹಳ ಹೊತ್ತಾದ ನಂತರ ನಾನು ಮಂದಿರದಿಂದ ಹೊರಬಂದೆ. ಮುಂದಿನ ನಾಲ್ಕು ದಿನಗಳೂ ಧ್ಯಾನಕ್ಕಾಗಿ ನಾನು ಆ ಮಂದಿರವನ್ನು ಹೊಕ್ಕಾಗ ಅವರು ಅಲ್ಲೇ ನೆಲೆಸಿದ್ದುದನ್ನು ಕಾಣುತ್ತಿದ್ದೆ. ಅಷ್ಟೇ ಅಲ್ಲ; ಅಲ್ಲಿ ಪ್ರಣಾಮಗಳನ್ನು ಸಲ್ಲಿಸುತ್ತಿದ್ದ ಭಕ್ತರಿಗಿಂತಲೂ ಹೆಚ್ಚು ಸತ್ಯವಾಗಿ ಅವರು ನನಗೆ ಕಾಣುತ್ತಿದ್ದರು ಮತ್ತು ಆ ಮಂದಿರವೆಲ್ಲಾ ಅವರ ದಿವ್ಯ ಸಾನ್ನಿಧ್ಯ ಶಕ್ತಿಯಿಂದ ತುಂಬಿಹೋಗಿರುವುದನ್ನು ಸ್ಪಷ್ಟವಾಗಿ ಅನುಭವಿಸುತಿದ್ದೆ.

ಮೇಲೆ ತಿಳಿಸಿದ ದರ್ಶನಗಳಿಗೂ ಶ್ರೀರಾಮಕೃಷ್ಣರ ಕುರಿತ ಆಮೇಲಿನ ದರ್ಶನಗಳಿಗೂ ಅನೇಕ ವರ್ಷಗಳ ಅಂತರವಿದೆ. ಆದರೆ, ಇದು ನನ್ನ ಬರವಣಿಗೆಯಲ್ಲಿ ಮಾತ್ರ. ನಾನು ಕೆಲವು ಮುಖ್ಯ ಅನುಭವಗಳನ್ನು ಮಾತ್ರ ತಿಳಿಸುತ್ತಿದ್ದೇನೆ. ಆದರೆ ಅವರೊಡನೆ ನಾನು ಹೊಂದಿದ್ದ ನಿಕಟ ಸಂಪರ್ಕದ ಅನುಭವಗಳನ್ನು ಬರವಣಿಗೆಗಳಲ್ಲಿ ವಿವರಿಸುವುದು ಅಸಾಧ್ಯ. ಅವರು ನನ್ನ ಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿದರು ಮತ್ತು ನನ್ನ ಸಾಧನೆಗಳಲ್ಲಿ ಸೂಕ್ತ ಮಾರ್ಗದರ್ಶನವನ್ನು ನೀಡಿದರು. ಅವರ ಅಹೇತುಕ ಪ್ರೀತಿ ನನ್ನ ಅಂತರಾಳವನ್ನೆಲ್ಲಾ ವ್ಯಾಪಿಸಿ, ಬಾಳಿನ ನೋವುಗಳನ್ನು ಉಪಶಮನ ಮಾಡಿ, ಜೀವನವನ್ನು ಸುಮಧುರವನ್ನಾಗಿ ಪರಿವರ್ತನೆ ಮಾಡಿತು. ಇವೆಲ್ಲದರ ಪ್ರತಿಯಾಗಿ ಅವರು ಇಚ್ಛಿಸಿದ್ದು ಈ ದೀನಳ ಹೃತ್ಪೂರ್ವಕ ಭಕ್ತಿಯನ್ನು ಮಾತ್ರ.

ನಾನು ಇನ್ನೂ ಆನಂದಾಶ್ರಮದಲ್ಲೇ ವಾಸಿಸುತ್ತಿದ್ದೆ. ಕ್ಯಾಲಿಫೋರ್ನಿಯಾದ ಚಳಿಗಾಲದ ರಾತ್ರಿಗಳು ಅನೇಕ ವೇಳೆ ಅಧಿಕ ಶೈತ್ಯ ಮತ್ತು ಬಿರುಗಾಳಿಗಳಿಂದ ಕೂಡಿರುತ್ತವೆ. ಇಂತಹ ಕೆಟ್ಟ ಹವೆಯಲ್ಲಿ ಹೊತ್ತು ಮೀರಿದ ರಾತ್ರಿ ಮಂದಿರಕ್ಕೆ ಒಬ್ಬಂಟಿಗಳಾಗಿ ಹೋಗಬಾರದೆಂದು ಒತ್ತಾಯದಿಂದ ನನ್ನನ್ನು ಒಡಂಬಡಿಸಿದ್ದರು. ಆದಕಾರಣ ನಾನು ಒಬ್ಬಳೇ ವಾಸಿಸುತ್ತಿದ್ದ ಮನೆಯ ಮೂರು ಕೋಣೆಗಳಲ್ಲಿ ಒಂದನ್ನು ನನ್ನ ಸ್ವಂತ ಧ್ಯಾನಮಂದಿರವನ್ನಾಗಿ ಪರಿವರ್ತಿಸಿಕೊಂಡಿದ್ದೆ. ಇದು ನನ್ನ ಓದುವ ಕೋಣೆಯ ಪಕ್ಕದಲ್ಲೇ ಇತ್ತು. ಸಂಘದ ಪೂಜಾಮಂದಿರವನ್ನು ಕಟ್ಟುವ ಮೊದಲು ಇದೇ ಪೂಜಾಮಂದಿರವಾಗಿ ಉಪಯೋಗಿಸಲ್ಪಡುತ್ತಿದ್ದು ಅನಂತರವೂ ಇದನ್ನು ಪರಿವರ್ತಿಸದೆ ಹಾಗೆಯೇ ಬಿಟ್ಟಿದ್ದರು.

ಯೂರೋಪಿನಲ್ಲಿ ನಾನು ಹತ್ತು ವರ್ಷಗಳು ನೆಲೆಸಿದ್ದ ಕಾರಣ ಪೂಜಾಗೃಹವನ್ನು ಅಲಂಕರಿಸಲು ಬೇಕಾದ ಅನೇಕ ಸಾಮಾನುಗಳನ್ನು ಸಂಗ್ರಹಿಸಿದ್ದೆ. ಅವುಗಳಲ್ಲಿ ಅನೇಕ ಶತಮಾನಗಳ ಹಿಂದಿನ ಅಪೂರ್ವವಾದ ಕಸೂತಿ ಕೆಲಸ ಮಾಡಿದ ರೇಷ್ಮೆ ರತ್ನಗಂಬಳಿಯ ಪರದೆ ಒಂದು. ಅದು ಒಂದೆ ಪುರಾತನ ಸ್ಪಾನಿಷ್ ಚರ್ಚಿನ ಪೂಜಾಮಂದಿರದ ಗೋಡೆಯೊಂದನ್ನು ಅಲಂಕರಿಸಿತ್ತು. ಅದನ್ನು ಸಾಲಮಾಂಕಾದ ಯತಿಗಳು ತಮ್ಮ ಸ್ವಹಸ್ತದಿಂದಲೇ ನೆಯ್ದಿದ್ದರು ಮತ್ತು ಅದಕ್ಕೆ ಉಪಯೋಗಿಸಿದ ರೇಷ್ಮೆ ದಾರವನ್ನು ತಾವೇ ಸಾಕಿದ ರೇಷ್ಮೆ ಗೂಡುಗಳಿಂದಲೇ ಅವರು ತಯಾರಿಸಿದ್ದರು. ಅದು ಒಂದು ಪವಿತ್ರ ಸ್ಥಳದಿಂದ ನನಗೆ ಬಂದಿತ್ತು. ಯಾವಾಗಲೂ ಪವಿತ್ರ ಸ್ಥಳಗಳಲ್ಲೇ ಅಲಂಕರಿಸಿತ್ತು. ಅದರಲ್ಲಿ ಪಾವಿತ್ರ್ಯವೇ ಹಾಸುಹೊಕ್ಕಿರುವಂತೆ ಕಾಣುತ್ತಿತ್ತು. ನಾನು ಅದನ್ನು ನನ್ನ ಈ ಪೂಜಾಗೃಹದ ವೇದಿಕೆಯ ಹಿಂಬದಿಯ ಗೋಡೆಗೆ ತೂಗುಹಾಕಿದ್ದೆ. ಅದನ್ನು ನೋಡಿದಾಗಲೆಲ್ಲಾ ಇದು ಅಲಕರಿಸಬೇಕಾಗಿದ್ದ ಸ್ಥಳವೇ ಅದು ಎಂದು ಭಾಸವಾಗುತ್ತಿತ್ತು.

ಈ ರೀತಿ ಪೂಜಾಗೃಹವನ್ನು ಅಲಂಕರಿಸಿದ ನಂತರ ಅದೆಷ್ಟು ಸಂತೋಷವನ್ನೀಯುತ್ತಿತ್ತು ಎಂದರೆ ಆ ಮಂದಿರವನ್ನು ನನ್ನೊಬ್ಬಳ ಉಪಯೋಗಕ್ಕಾಗಿ ಮಾತ್ರ ಬಳಸಲು ನನ್ನ ಮನಸ್ಸು ಒಪ್ಪಲಿಲ್ಲ. ಹಾಗಾಗಿ ಆ ಮಂದಿರವನ್ನು ಎಲ್ಲರೂ ಉಪಯೋಗಿಸಲು ಅವಕಾಶ ಮಾಡಿಕೊಟ್ಟೆ. ಅದನ್ನು ಸಂದರ್ಶಿಸಿದವರೆಲ್ಲರೂ ತಮ್ಮ ಸ್ನೇಹಿತರನ್ನು ಅಲ್ಲಿಗೆ ಕರೆತರಲು ಆಶಿಸುತ್ತಿದ್ದರು ಮತ್ತು ಅದರ

ವಿಷಯ ಕೇಳಿದವರು ಆ ಮಂದಿರವನ್ನು ಕಣ್ಣಾರೆ ನೋಡಲು ತವಕಿಸುತ್ತಿದ್ದರು. ಅದನ್ನು ಸಂದರ್ಶಿಸಿದ ಭಕ್ತರು ಸ್ವಲ್ಪ ಹೊತ್ತು ಅಲ್ಲೇ ಮೌನವಾಗಿ ಕುಳಿತಿದ್ದು ಪ್ರಣಾಮಗಳನ್ನು ಸಲ್ಲಿಸಿ ಹೊರ ಬರುವಾಗ ತಾವು ಅನುಭವಿಸಿದ ಅನಿರ್ವಚನೀಯವಾದ ಆನಂದ ವನ್ನು ಹನಿಗೂಡಿದ ತಮ್ಮ ಕಣ್ಣುಗಳಿಂದಲೇ ಸೂಚಿಸುತ್ತಿದ್ದರು.

ಆದರೆ ನನ್ನ ಕೆಲವು ಸ್ನೇಹಿತರು ಈ ರೀತಿಯಾಗಿ ನಾನು ಎಲ್ಲರನ್ನೂ ಅಲ್ಲಿಗೆ ಆಹ್ವಾನಿಸುತ್ತಿರುವುದರ ಕುರಿತಾಗಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿದ್ದರು. ಅಭಿಪ್ರಾಯ ಹೀಗಿತ್ತು: ''ನಮ್ಮ ವೈಯಕ್ತಿಕ ಧ್ಯಾನಮಂದಿರವನ್ನು ನಮ್ಮ ಸ್ವಂತ ಸಾಧನೆಗೆ ಮಾತ್ರ ಮೀಸಲಾಗಿಡಬೇಕು, ಸಿಕ್ಕಿದವರನ್ನೆಲ್ಲಾ ಅಲ್ಲಿಗೆ ಬಿಡ ಬಾರದು'' ಎಂದು. ಅವರ ಅಭಿಪ್ರಾಯ ನನ್ನಲ್ಲಿ ಬಹಳ ಕಳವಳ ವನ್ನು ಉಂಟುಮಾಡಿತು. ಏಕೆಂದರೆ ಪವಿತ್ರವಾದ ಈ ಪೂಜಾ ಗೃಹವನ್ನು ನಾನು ಬಹುಶಃ ಈ ರೀತಿ ಅಪವಿತ್ರಗೊಳಿಸುತ್ತಿರ ಬಹುದು ಎಂಬ ಶಂಕೆ ನನ್ನನ್ನು ಆವರಿಸಿತು. ಇದನ್ನು ನಾನು ಬಗೆಹರಿಸಲಾರದೆ ಹೋದೆ. ಕೊನೆಗೆ ಇದನ್ನು ನನಗಿಂತಲೂ ಪ್ರಬಲವಾದ ಶಕ್ತಿಯೇ ನಿರ್ಧರಿಸಲೆಂದು ತೀರ್ಮಾನಿಸಿದೆ.

ಈ ರೀತಿ ನಿಶ್ಚಯಿಸಿ ನಾನು ಮಂದಿರದ ಒಳಗೆ ಹೋಗಿ, ಅವನ ಆದೇಶಕ್ಕಾಗಿ ಪ್ರಾರ್ಥಿಸಿಕೊಂಡೆ. ಆದರೆ ಈ ಪ್ರಾರ್ಥನೆಗೆ ಏನೂ ಉತ್ತರ ಬರಲಿಲ್ಲ. ಅನಂತರ ನಾನು ಪೂಜಾಗೃಹದ ಬಾಗಿ ಲನ್ನು ತೆಗೆದು ಒಳಗೆ ಕಾಲಿಟ್ಟೊಡನೆ ನನಗೆ ಅತ್ಯಾಶ್ಚರ್ಯವಾ ಯಿತು. ಏಕೆಂದರೆ, ಆ ಪರದೆಯ ಹೊರತು ಇನ್ನೊಂದು ವಸ್ತುವೂ ಇಲ್ಲದಂತೆ ಆ ಮಂದಿರ ಬರಿದಾಗಿತ್ತು. ಅಷ್ಟೇ ಅಲ್ಲ; ಆ ಪರದೆಯ ಮುಂದೆ ಭಗವಾನ್ ಶ್ರೀರಾಮಕೃಷ್ಣರು ಮುಗುಳ್ನಗೆಯೇ ಮೂರ್ತಿವೆತ್ತಂತೆ ಬೆಳಗುತ್ತಾ ನಿಂತಿದ್ದಾರೆ. ಅವರು ದಯಾರ್ದ್ರ ಹೃದಯದಿಂದ ತಮ್ಮ ಎರಡೂ ಕೈಗಳನ್ನು ಮುಂದೆ ನೀಡಿ, ನನ್ನೊ ಡನೆ, ''ಇಲ್ಲಿಗೆ ಬರುವವರೆಲ್ಲರಿಗೂ ಇದೇ ರೀತಿ ನಾನು ಸಂತಸದ ಸ್ವಾಗತವನ್ನು ನೀಡುತ್ತೇನೆ'' ಎಂದರು. ಈ ಮಂದಿರವನ್ನು ಸಂದ ರ್ಶಿಸಿದ ಭಕ್ತರೆಲ್ಲರಿಗೂ ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದ ಅನು ಭವ ಆಗುತ್ತಿದೆ ಎಂದು ನನಗೆ ಆಗ ಗೊತ್ತಾಯಿತು. ಸಂತೋಷ ಹೊಂದಿದೆ, ನಿಶ್ಚಿಂತಳಾದೆ.

ಬೋನವೆಂಟುರಾ ಎಂಬವನು ಬರೆದಿರುವ ಅಸ್ಸೀಸಿಯ ಸಂತ ಫ್ರಾನ್ಸಿಸ್‌ನ ಜೀವನಚರಿತ್ರೆಯಲ್ಲಿ ಆ ಸಂತನಿಗಾದ ಕ್ರಿಸ್ತನ ಶಿಲುಬೆಯ ಗಾಯದ ಕಲೆಗಳನ್ನು ಕುರಿತು ಉಲ್ಲೇಖಿಸಿದ್ದಾನೆ. ಆ ಕಲೆಗಳು ಸಂತನ ಶರೀರದಲ್ಲಿ ತೋರಿಕೊಂಡಾಗ ಆತನು ಆ ವಿಷಯವನ್ನು ಬಹಿರಂಗಪಡಿಸಬೇಕೋ, ಬೇಡವೋ ಎಂಬ ಸಂಶ ಯಕ್ಕೆ ಒಳಗಾಗುತ್ತಾನೆ. ಆಗ ಆತನು ಸಂಘದ ಆಪ್ತ ಸೋದರ ರೆಲ್ಲರನ್ನೂ ಕರೆಸಿ ಅವರ ಸಲಹೆಗಳನ್ನು ಕೇಳುತ್ತಾನೆ. ಆಗ ಸೋದರರಲ್ಲಿ ಒಬ್ಬ ಜ್ಞಾನಿ, ''ಸೋದರ! ಈ ದಿವ್ಯ ರಹಸ್ಯಗಳನ್ನು ಭಗವಂತನು ನಿನ್ನೊಬ್ಬನ ಸಲುವಾಗಿ ಮಾತ್ರ ಹೊರಗೆಡಹಿಲ್ಲ; ಜನರ ಉದ್ಧಾರಕ್ಕಾಗಿಯೇ ಇವುಗಳನ್ನು ನಿನ್ನ ಮೂಲಕ ತಿಳಿಯ ಪಡಿಸಿರುತ್ತಾನೆ. ಆದ ಕಾರಣ, ನಿನ್ನ ಅನುಭವಗಳನ್ನು ಎಲ್ಲರಿಗೂ ತಿಳಿಸುವುದೇ ಸೂಕ್ತವಾದ ಮಾರ್ಗ'' ಎಂದು ಹೇಳಿದನು.

ಭಗವಂತನು ನಮ್ಮೆಲ್ಲರ ಅಂತರ್ಯದಲ್ಲಿದ್ದಾನೆ. ಅವನೇ ಮಾನವನಲ್ಲಿರುವ ಅವಿನಾಶಿಯಾದ ಅಂಶ. ಆತನಿಗೆ ಎಲ್ಲವೂ ಸಾಧ್ಯ. ಆದ ಕಾರಣ ಪ್ರಕೃತಿ ಆತನ ಅಧೀನ. ವಸ್ತುಸ್ಥಿತಿ ಹೀಗಿರು ವಾಗ ಭಕ್ತನ ದೃಢ ಭಕ್ತಿಯ ದೆಸೆಯಿಂದ ಏಕೆ ಅವನು ಪ್ರತ್ಯಕ್ಷ ನಾಗಿ ಗೋಚರಿಸಬಾರದು? ಮತ್ತು ಸದಾಕಾಲವೂ ಏಕೆ ಅವನ ಒಡನಾಡಿಯಾಗಿರಬಾರದು? ಭಕ್ತನ ವಿವಿಧ ಭಾವಗಳಿಗೆ ಅನು ಗುಣವಾಗಿ ಅವನೇ ಅನೇಕ ನಾಮರೂಪಗಳನ್ನು ಧರಿಸಿ ಪ್ರತ್ಯಕ್ಷ ನಾಗುತ್ತಾನೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಅವನು ಸ್ಪೈಯಿನ್ ದೇಶದ ಸಂತ ಥೆರೆಸ್ಸಾಳಿಗೆ ಏಸುಕ್ರಿಸ್ತ ನಾಗಿ, ಶ್ರೀರಾಮಕೃಷ್ಣರಿಗೆ ತಾಯಿ ಭವತಾರಿಣಿಯಾಗಿ, ಸಂತ ಪಾಲನಿಗೆ ದಮಾಸ್ಕಸ್ಸಿಗೆ ಹೋಗುವ ದಾರಿಯಲ್ಲಿ ಅಶರೀರ ವಾಣಿ ಯಾಗಿ, ಮೊತ್ತಮೊದಲಿನ ಫ್ರಾನ್ಸಿಸ್ಕನ್ ಭ್ರಾತೃತ್ವ ಸಂಘದ ಜೆಲೆಂಟಿಗೆ ದೇವದೂತನಾಗಿ ಅಥವಾ ಶಿಲುಬೆಗೇರಿದ ಕ್ರಿಸ್ತನ ರೂಪದಲ್ಲಿ ಕಾಣಿಸಿಕೊಂಡನು. ಸಾಧಾರಣಳಾದ ನನ್ನ ದೃಷ್ಟಿಗೆ ಅವನು ಶ್ರೀರಾಮಕೃಷ್ಣರಾಗಿ ದರ್ಶನವಿತ್ತನು. ಇದು ಕ್ರೈಸ್ತ ಮತ ವನ್ನು ನಾನು ತ್ಯಜಿಸಿಬಿಟ್ಟಿರಬಹುದೆಂಬ ಕಾರಣದಿಂದಲ್ಲ (ನಿಜ ವಾಗಿ ನಾನು ಕ್ರೈಸ್ತಮತವನ್ನು ತ್ಯಜಿಸಿಯೂ ಇಲ್ಲ). ಬದಲಾಗಿ, ಶ್ರೀರಾಮಕೃಷ್ಣರು ತಮ್ಮ ಸರ್ವಧರ್ಮ ಸಮನ್ವಯದ ದೃಷ್ಟಿ ಯಿಂದ ಎಲ್ಲ ಮತಗಳ ಸಾರವಾದ ಪರಮಾತ್ಮನನ್ನು ಮತ್ತಷ್ಟು ಸ್ಪಷ್ಟವಾಗಿಯೂ ಮತ್ತು ನನ್ನ ಮಟ್ಟಿಗೆ ಅತ್ಯಂತ ಪ್ರಾಮುಖ್ಯವೂ ಆಗುವಂತಹ ಪರಿಣಾಮವನ್ನು ಬೀರಿದ ಕಾರಣದಿಂದ ಮಾತ್ರ.

ಈ ಪುಟಗಳಲ್ಲಿ ತಿಳಿಸಿರುವ ಅನುಭವಗಳನ್ನು ನಾನು ವಿವ ರಿಸಿಯೂ ಇಲ್ಲ , ವಿಶ್ಲೇಷಿಸಿಯೂ ಇಲ್ಲ. ಭೌತಶಾಸ್ತ್ರ ಮತ್ತು ಖಗೋಳ ಶಾಸ್ತ್ರಗಳ ಹೊಸ ಸಂಶೋಧನೆಗಳ ಅಧ್ಯಯನದಿಂದ ನಮ್ಮ ಪಂಚೇಂದ್ರಿಯಗಳಿಗೂ ನಿಲುಕದ ಅನೇಕ ನಿಯಮಗಳಿವೆ ಮತ್ತು ಆರನೇ ಜ್ಞಾನೇಂದ್ರಿಯವಾದ ಮನಸ್ಸಿಗೂ ಸಹ ನಿಲುಕದ ಅತ್ಯಂತ ಸೂಕ್ಷ್ಮವಾದ ಶಕ್ತಿಗಳಿವೆ ಎಂದು ಗೊತ್ತಾಗಿದೆ. ಈಗ ನಾವು ವಾಸಿಸುತ್ತಿರುವ ನಿಯಮಬದ್ಧವಾದ ಮತ್ತು ಹೆಚ್ಚು ವಿಕಾಸ ಹೊಂದಿರುವ ಈ ಪ್ರಪಂಚದಲ್ಲಿ ಅತ್ಯಂತ ಅಸಂಭವ ವೆನಿಸಿದ್ದೂ ಕೂಡ ಸಂಭವಿಸಬಹುದು.

ಒಂದು ಸಣ್ಣ ಬೀಜದಿಂದ ಅತ್ಯಂತ ವಿಶಾಲವಾದ ಮರ ವೊಂದು ಹುಟ್ಟುವುದಕ್ಕಿಂತ ಅಥವಾ ಮಾನವದೇಹದೊಳಗೆ ನಮಗೆ ಅರಿವಿಲ್ಲದೆಯೆ ಅತ್ಯಂತ ಗಹನವಾದ ಕ್ರಿಯೆಗಳು ಸದಾ ನಡೆಯುತ್ತಿರುವುದಕ್ಕಿಂತ ಮತ್ತು ಒಂದು ಬೆಟ್ಟದ ಮೇಲಿನ ಬರಡು ನೆಲದಲ್ಲಿ ಸುಂದರವಾದ ಪುಷ್ಪವೊಂದು ಅರಳುವುದ ಕ್ಕಿಂತ ಭಗವಂತನು ಪ್ರತ್ಯಕ್ಷರೂಪದಿಂದ ತೋರಿ ಮರೆಯಾಗು ವುದು ಹೆಚ್ಚು ಆಶ್ಚರ್ಯವಲ್ಲ. ಈ ಬಗೆಯ ಪವಾಡಗಳನ್ನು

ತೋರಿಸಲು ಪ್ರಕೃತಿಯು ಕೆಲವು ಸೂಕ್ಷ್ಮ ನಿಯಮಗಳನ್ನು ಅನುಸರಿಸಿದರೆ ಸಾಕು; ತನ್ನ ಸಾಮಾನ್ಯ ನಿಯಮವನ್ನು ಮೀರಬೇಕಾಗಿಲ್ಲ. ಇದು ತರ್ಕಕ್ಕೆ ವಿರೋಧವಾಗಿ ತೋರಿದರೂ, ನಿಜವಾಗಿ ಅದಕ್ಕೂ ಮೀರಿದ ಅಗೋಚರವಾದ ಶಕ್ತಿಯ ಕೆಲಸಕ್ಕೆ ಅವಕಾಶ ಮಾಡಿಕೊಡುವುದೇ ಆಗಿದೆ.

ಇಡೀ ಜೀವನವೇ ಒಂದು ಪವಾಡ. ನಾವು ಮಾಡುವ ಅನೇಕ ತಪ್ಪುಗಳಲ್ಲೂ ಸಹ ಪವಾಡದ ಅಂಶವಿದೆ; ಏಕೆಂದರೆ ನಾವು ಅವುಗಳ ಮೂಲಕವಾಗಿ ಮತ್ತಿನ್ನಾವ ಬಗೆಯಲ್ಲೂ ಅರಿಯಲಾಗದ ಸತ್ಯವನ್ನು ಮನಗಾಣುತ್ತೇವೆ. ಭವಿಷ್ಯವು ಅರಿಯಬೇಕಾದ ರಹಸ್ಯ. ವರ್ತಮಾನಕಾಲವು ಇನ್ನೊಂದು ಬಗೆಯ ರಹಸ್ಯ. ಅದನ್ನು ಅರಿಯಲು ನಾವು ಕೈಹಾಕಿದೊಡನೆ ಅದು ನಮ್ಮಿಂದ ಜಾರಿಕೊಂಡು ಬಿಡುತ್ತದೆ. ಪ್ರಕೃತಿಯ ಕಾರ್ಯಗಳು ಅತಿ ರಹಸ್ಯವಾಗಿವೆ. ಅವಳು ತನ್ನ ಪ್ರಯೋಗಶಾಲೆಯನ್ನು ಕೇವಲ ತನ್ನೊಬ್ಬಳಿಗೆ ಪ್ರವೇಶವಿರುವ ಜಾಗದಲ್ಲಿ ಜಾಗರೂಕಳಾಗಿ ನಿರ್ಮಿಸುತ್ತಾಳೆ.

ವಿಜ್ಞಾನಿಗಳು ಅವಳ ರಹಸ್ಯವನ್ನು ಬಯಲು ಮಾಡಲು ಸತತವಾಗಿ ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಅವಳ ರಹಸ್ಯಗಳಲ್ಲಿ ಕೆಲವು ತಿಳಿದುಬಂದಾಗ, ಅವರಿಗೆ ಒಂದು ಕಡೆ – ಸೂಕ್ಷ್ಮಕ್ಕೂ ಸೂಕ್ಷ್ಮವಾದ ಶಕ್ತಿಗಳೊಡನೆಯೂ ಮತ್ತೊಂದು ಕಡೆ ಮಹತ್ತಿಗೂ ಮಹತ್ತಾದ ಶಕ್ತಿಗಳೊಡನೆಯೂ ವ್ಯವಹರಿಸಬೇಕಾಗಿದೆ ಎಂದು ಅರಿಕೆಯಾಗಿದೆ. ಒಂದು ಕಡೆ ಅತ್ಯಂತ ಸೂಕ್ಷ್ಮವಾದ ಪರಮಾಣು ಪ್ರಪಂಚ – ಮತ್ತೊಂದು ಕಡೆ ಅತ್ಯಂತ ವಿಶಾಲವಾದ ವಿಶ್ವದ ಗಣನೆ – ಜ್ಯೋತಿರ್ವರ್ಷಗಳ ವ್ಯವಹಾರ. ಭೌತಶಾಸ್ತ್ರ ಮತ್ತು ಖಗೋಳಶಾಸ್ತ್ರದ ಸಿದ್ಧಾಂತಗಳು ಬುಡಮೇಲಾಗುತ್ತಿವೆ. ಕಾಲ, ದೇಶ, ದೂರ, ವಿಶ್ವದ ರಚನೆ ಮುಂತಾದ ವಿಷಯಗಳಲ್ಲಿ ಅಂತಿಮ ನಿರ್ಧಾರವೆಂಬುದು ಕೇವಲ ಕನಸಾಗಿದೆ. ಪರಿಸ್ಥಿತಿ ಹೀಗಿರುವಾಗ ಇನ್ನೂ ನಿರ್ಣಯವಾಗದೆ ಉಳಿದಿರುವ ಅನೇಕ ವಿಷಯಗಳಲ್ಲಿ ಕೆಲವೊಂದಕ್ಕಾದರೂ ಸಮಾಧಾನ ದೊರಕಬಹುದೆಂದು ನಾವು ನಿರೀಕ್ಷಿಸಬಹುದು.

ಸೃಷ್ಟಿಯ ಮೂಲವು ಅತ್ಯಂತ ಸೂಕ್ಷ್ಮವಾದ ಪರಮಾಣುವಿನ ಮಿತಿಗೆ ತಲುಪಿದೆ ಮತ್ತು ಅತ್ಯಂತ ಸೂಕ್ಷ್ಮವಾದ ಶಕ್ತಿಗಳನ್ನು ಹೊರಗೆಡಹಲಾಗಿದೆ. ಇಂದು ವಿಜ್ಞಾನವು ಅಧ್ಯಾತ್ಮದ ಸಮೀಪಕ್ಕೆ ಬರುತ್ತಿದೆ. ಸೂಕ್ಷ್ಮ ಶಕ್ತಿ ಎಲ್ಲಾ ವಸ್ತುಗಳ ಮೂಲಕ ಸುಲಭವಾಗಿ ಹಾದುಹೋಗುತ್ತದೆ. ಇದು ಹೀಗಿರುವಾಗ ಏಸುವು ಫ್ಲಾಂಡರ್ಸ್ ಯುದ್ಧಭೂಮಿಯಲ್ಲಿ ಎಲ್ಲರಿಗೂ ಕಾಣುವಂತೆ ಪ್ರತ್ಯಕ್ಷನಾಗಿರಲಾರನೇನು? ಅಥವಾ ಸಂತ ಪಾಲನಿಗೆ ಕಣ್ಣು ಕೋರೈಸುವಂತೆ ದಿವ್ಯ ತೇಜಸ್ಸಿನ ರೂಪದಲ್ಲಿ ತೋರಿ ಅವನೊಡನೆ ಮಾತನ್ನು ಆಡಿರಲಾರನೇನು? ಸಂತ ಫ್ರಾನ್ಸಿಸನ ಕೈಕಾಲುಗಳ ಮೇಲೆ ಯಾವನೋ ಒಬ್ಬ ದೇವದೂತನು ಕ್ರಿಸ್ತನ ಶಿಲುಬೆಯ ಕಲೆಗಳ ಮುದ್ರೆಗಳನ್ನು ಒತ್ತಿರಲು ಸಾಧ್ಯವಿಲ್ಲವೇನು ?

ಮಾನವನು ಜೀವನದ ರಹಸ್ಯವನ್ನು ಹೆಚ್ಚುಹೆಚ್ಚಾಗಿ ಅರಿಯುತ್ತಿದ್ದಾನೆ. ಅವನು ಮೃತ್ಯುವಿನ ಸ್ವರೂಪವನ್ನು ಅರಿಯುವ ಕಾಲವು ಬೇಗನೆ ಬರಲಿದೆ: ಆದರೆ ಇದು ಪ್ರಯೋಗಶಾಲೆಯ ಸೂಕ್ಷ್ಮದರ್ಶನ ಯಂತ್ರಗಳಿಂದ ಅಥವಾ ಸಾಮಾನ್ಯ ಮನೋವಿಶ್ಲೇಷಣೆಯಿಂದ ಸಾಧ್ಯವಾಗುವುದಿಲ್ಲ. ಅದು ಅತ್ಯಂತ ಸೂಕ್ಷ್ಮವಾದ ನಿಯಮಗಳ ಸ್ಫುರಣದಿಂದ ಮಾತ್ರ ಸಾಧ್ಯ. ಪ್ರಕೃತಿಯ ನಿಯಮಗಳನ್ನು ಪರಿಶೀಲಿಸಿದಾಗ – ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನು ಮಾನವರೂಪದಲ್ಲಾಗಲಿ ಅಥವಾ ದಿವ್ಯರೂಪದಲ್ಲಾಗಲಿ ಮನುಷ್ಯನಿಗೆ ತನ್ನ ಪ್ರತ್ಯಕ್ಷ ಸಾನ್ನಿಧ್ಯದ ಅರಿವನ್ನು ದಯಪಾಲಿಸುವ ವಿಷಯ ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿಲ್ಲ ಎಂಬುದನ್ನು ನಿಸ್ಸಂಶಯವಾಗಿ ಅರಿಯಬಹುದಾಗಿದೆ.

*(ಮುಗಿಯಿತು)*

## ‘ಎಳೆಯ ವಯಸ್ಸಿನಲ್ಲೇ ಸಾಧನೆಗೆ ತೊಡಗು’

‘‘ಮನಸ್ಸು ಸಾಸಿವೆ ಕಾಳಿನ ಒಂದು ಪೊಟ್ಟಣದಂತೆ. ಒಂದು ಸಾರಿ ಅವು ಚದುರಿದರೆ ಅದನ್ನು ಒಟ್ಟುಗೂಡಿಸುವುದು ಕಷ್ಟ. ಅದಕ್ಕೆ ಮನಸ್ಸು ಚಂಚಲವಾಗುವುದಕ್ಕೆ ಮುಂಚೆ ಏಕಾಗ್ರ ಮಾಡಿ ಎಂದು ನಾನು ನಿಮಗೆ ಹೇಳುವುದು. ನಿಮಗೆ ವಯಸ್ಸಾಗಿ ಮಾನಸಿಕ ಶಕ್ತಿಯೆಲ್ಲಾ ಚದುರಿಹೋದ ಮೇಲೆ ಪುನಃ ಅದನ್ನು ಏಕಾಗ್ರ ಮಾಡಬೇಕಾದರೆ ಬಹಳ ಕಷ್ಟಪಡಬೇಕು. ಆಗ ಮನಸ್ಸನ್ನು ಯಾವುದಾದರೊಂದು ವಸ್ತುವಿನ ಮೇಲೆ ನಿಲ್ಲಿಸಬೇಕಾದರೆ ಅದ್ಭುತ ಶ್ರಮಪಡಬೇಕು.

‘‘ಸಣ್ಣ ಮಕ್ಕಳ ಮನಸ್ಸಿನ ಮೇಲೆ ಎಷ್ಟು ಬೇಗ ಪರಿಣಾಮವನ್ನುಂಟುಮಾಡಬಹುದು ಎಂಬುದನ್ನು ನೀವು ಗಮನಿಸಿಲ್ಲವೆ? ನೀವೂ ಅವರಂತೆ. ನೀವೂ ನಿಮ್ಮ ಜೀವನವನ್ನು ತಿದ್ದಿಕೊಳ್ಳಬೇಕಾದರೆ ನಿಮ್ಮ ಹದಿನಾರನೆಯ ವಯಸ್ಸಿನಿಂದ ಮೂವತ್ತನೆಯ ವಯಸ್ಸಿನವರೆಗೆ ಪ್ರಯತ್ನಪಡಿ. ಅನಂತರ ಆತ್ಮಸಾಕ್ಷಾತ್ಕಾರವನ್ನು ಪಡೆಯುವ ಸಂಭವ ಕಡಿಮೆ. ಮೂವತ್ತು ವರುಷದವರೆಗೆ ದೇಹ ಮತ್ತು ಮನಸ್ಸು ಶುದ್ಧವಾಗಿರುವುದು. ಮನಸ್ಸಿಗೆ ಒಂದು ಆಕಾರವನ್ನು ಕೊಡುವ ಸಮಯ ಅದು. ನಿಮ್ಮ ಜೀವನದ ಗುರಿಯನ್ನು ಸಾಧಿಸಲು ಹೃತ್ಪೂರ್ವಕ ಯತ್ನಿಸಬೇಕು. ಯೌವನ ಕಾಲದಲ್ಲಿ ಮನಸ್ಸಿನ ಮೇಲೆ ಯಾವ ಒಂದು ಪ್ರಭಾವವಿರುವುದೋ ಅದೇ ಜೀವನವೆಲ್ಲ ಇರುವುದು. ಭಗವಂತನ ಸಾಕ್ಷಾತ್ಕಾರಕ್ಕಾಗಿ ಶುದ್ಧ ಜೀವನವನ್ನು ನಡೆಸಬೇಕೆಂದು ನೀನು ಸಂಕಲ್ಪಿಸಿದ್ದರೆ ಇಂದಿನಿಂದಲೇ ನಿನ್ನ ಕೈಲಾದುದನ್ನೆಲ್ಲಾ ಮಾಡು.’’

— ಸ್ವಾಮಿ ಬ್ರಹ್ಮಾನಂದ